## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀಮತಿ ಲಕ್ಕಮ್ಮಮೂರ್ತಿ, ಬೆರಳಚ್ಚುಗಾರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕೇಂದ್ರ ಕಚೇರಿ, ಬೆಂಗಳೂರು ಇವರ ವೈದ್ಯಕೀಯ ವೆಚ್ಚ ಮರುಪಾವತಿಸುವ ಬಗ್ಗೆ – ಆದೇಶ

ಓದಲಾಗಿದೆ :-1) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಮುಇಂ/ಪಂರಾಇಂಇ/ ಸಿ-07/469, ದಿನಾಂಕ: 24.05.2018

2) ಸರ್ಕಾರದ ಆದೇಶ ಸಂಖ್ಯೆ: ಆಇ **01** ಟಿಎಫ್‌ಪಿ **2012**, ದಿನಾಂಕ : **20.01.12** ಮತ್ತು ಸಿಆಸುಇ **31** ಎಸ್‌ಎಂಆರ್ **2014**, ದಿನಾಂಕ : **05.11.14**

*****

ಪ್ರಸ್ತಾವನೆ :

ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 24.05.2018ರ ಪತ್ರದಲ್ಲಿ ಶ್ರೀಮತಿ ಲಕ್ಕಮ್ಮಮೂರ್ತಿ, ಬೆರಳಚ್ಚುಗಾರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕೇಂದ್ರ ಕಚೇರಿ, ಬೆಂಗಳೂರು ಇವರು Carcinoma Ovaries ಎಂಬ ಖಾಯಿಲೆ ಸಂಬಂಧ ದಿನಾಂಕ: 25.10.2017 ಮತ್ತು 16.11.2017ರಂದು Oncology India, Banglore ಇಲ್ಲಿ ಚಿಕಿತ್ಸೆಗೆ ಒಳಪಟ್ಟಿದ್ದು, ಇದಕ್ಕೆ ರೂ. 41,220/- ಗಳು ವೆಚ್ಚವಾಗಿದ್ದು, ಸದರಿ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ ಕಾರಣ ಒಟ್ಟಾರೆ ಚಿಕಿತ್ಸೆಗೆ ವೆಚ್ಚವಾದ ಮೊತ್ತದ ಪೈಕಿ ನಿರ್ದೇಶಕರು, ಆರೋಗ್ಯ ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರು ದೃಢೀಕರಿಸಿರುವಂತೆ ಮರುಪಾವತಿಸಬಹುದಾದ ಅರ್ಹತಾ ಮೊತ್ತ ರೂ.33,150/- ಗಳನ್ನು ಮರುಪಾವತಿಸಲು ವಿಶೇಷ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶ ದಿನಾಂಕ : 20.01.2012 ಮತ್ತು 05.11.2014ಗಳಲ್ಲಿ ತಿಳಿಸಿರುವ ಅಂಶಗಳನ್ವಯ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಶ್ರೀಮತಿ ಲಕ್ಕಮ್ಮಮೂರ್ತಿ, ಬೆರಳಚ್ಚುಗಾರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕೇಂದ್ರ ಕಚೇರಿ, ಬೆಂಗಳೂರು ಇವರು ತೀವ್ರ ಗಂಭೀರ ಸ್ವರೂಪದ ಮರಣಾಂತಿಕ ಖಾಯಿಲೆಯಿಂದ ಬಳಲಿರುವುದನ್ನು ಗಣನೆಗೆ ತೆಗೆದುಕೊಂಡು, ರೋಗಿಯ ಜೀವನ್ಮರಣ ಹೋರಾಟದ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ Oncology India, Banglore ಇಲ್ಲಿ ಚಿಕಿತ್ಸೆ ಪಡೆದಿರುವುದನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರು ನೀಡಿರುವ ಅಭಿಪ್ರಾಯದನುಸಾರ ಸದರಿಯವರ ಚಿಕಿತ್ಸಾ ವೆಚ್ಚದ

ಪೈಕಿ ಮರುಪಾವತಿಸಬಹುದಾದ ಅರ್ಹತಾ ಮೊತ್ತವೆಂದು ರೂ. 33,150/-ಗಳನ್ನು ಮರುಪಾವತಿಸಲು ಸರ್ಕಾರದ ವಿಶೇಷ ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 229 ಜಿಪಅ 2018, ಬೆಂಗಳೂರು, ದಿನಾಂಕ :13.11.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 31ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 14ನ್ನು ಸಡಿಲಿಸಿ, ಶ್ರೀಮತಿ ಲಕ್ಷ್ಮಮ್ಮಮೂರ್ತಿ, ಬೆರಳಚ್ಚುಗಾರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕೇಂದ್ರ ಕಚೇರಿ, ಬೆಂಗಳೂರು ಇವರು Carcinoma Ovarics ಎಂಬ ಖಾಯಿಲೆ ಸಂಬಂಧ ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ Oncology India, Banglore ಇಲ್ಲಿ ಚಿಕಿತ್ಸೆ ಪಡೆದಿರುವುದನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿಯವರ ಚಿಕಿತ್ಸಾ ವೆಚ್ಚದ ಪೈಕಿ ರೂ. 33,150/- (ಮೂವತ್ತ ಮೂರು ಸಾವಿರದ ಒಂದು ನೂರ ಐವತ್ತು ರೂಪಾಯಿಗಳು)ಗಳನ್ನು ಮಾತ್ರ ಅರ್ಹತಾ ಮೊತ್ತವೆಂದು ಮರುಪಾವತಿಸಲು ಸರ್ಕಾರದ ವಿಶೇಷ ಮಂಜೂರಾತಿ ನೀಡಿದೆ.

ಕ್ಲೇಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ, ಇತ್ಯಾದಿ ಯಾವುದೇ ಇತರ ಮೂಲಗಳಿಂದ ಹಿಂಪಡೆದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

13/11/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ :-

13/11/18

1. ಮಹಾಲೇಖಪಾಲರು, (ಲೆಕ್ಕಪತ್ರ ಅ & ಇ) ಕರ್ನಾಟಕ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ / ಜಲಸಂಪನ್ಮೂಲ ಇಲಾಖೆ
3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಮೂಲ ಬಿಲ್ಲುಗಳನ್ನು ಇದರೊಂದಿಗೆ ಲಗತ್ತಿಸಿದೆ - ನೊಂದಣಿ ಅಂಚೆ ಮೂಲಕ
5. ಶ್ರೀಮತಿ ಲಕ್ಷ್ಮಮ್ಮಮೂರ್ತಿ, ಬೆರಳಚ್ಚುಗಾರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕೇಂದ್ರ ಕಚೇರಿ, ಬೆಂಗಳೂರು

ಪ್ರತಿಯನ್ನು :